ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 19.06.2026

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ. ಎಂ.ಆರ್.ಎನ್ ವಕೀಲರಿಂದ

1. ನಾನು ಯಾವುದೇ ವಿಧ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಹೆಸರು ಚಿಕ್ಕಚನ್ನೇಗೌಡ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಬಾಂಬೆಯಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನ ಸಂಬಳದಲ್ಲಿ ಪಿ ಎಫ್ ಹಣ ಕಟಾವು ಆಗುತ್ತಿತ್ತು ಈ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಬಾಂಬೆಯಲ್ಲಿ ಇದ್ದಾಗ ನನಗೆ ಸುಮಾರು ಹದಿನೈದು ಸಾವಿರ ಸಂಬಳ ಬರುತ್ತಿತ್ತು. ಈ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಸೆಪ್ಟೆಂಬರ್ ಮಾಹೆ 2005 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನನಗೆ ನಿವೃತ್ತಿ ಹೊಂದಿದ ಸಮಯದಲ್ಲಿ ನನಗೆ ಇಪ್ಪತ್ತು ಸಾವಿರ ಹಣ ಬಂದಿರುತ್ತದೆ. ಸಾಕ್ಷಿ ನಂತರ ಇಪ್ಪತ್ತು ಲಕ್ಷ ಬಂದಿರುತ್ತದೆ ಎಂದು ನುಡಿಯುತ್ತಾರೆ. ಇಪ್ಪತ್ತು ಲಕ್ಷ ರೂಪಾಯಿ ನನಗೆ ನಿವೃತ್ತಿ ಸಮಯದಲ್ಲಿ ಬಂದಿತ್ತು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

2. ನಾನು ಜಮೀನನ್ನು ಕ್ರಯಕ್ಕೆ ತಗೆದುಕೊಳ್ಳುವ ಸಮಯದಲ್ಲಿ ನಾನು ಮತ್ತು ನನ್ನ ಮಕ್ಕಳು ಒಟ್ಟು ಕುಟುಂಬದಲ್ಲಿ ಇದ್ದುಕೊಂಡು ಒಟ್ಟಿಗೆ ಸಂಪಾದನೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಈಗ ನನ್ನ ಒಬ್ಬ ಮಗ ಟಿ ವಿ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದು ಎಷ್ಟು ಆದಾಯ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಕಂಪನಿಯವರು ನನಗೆ ನಿವೃತ್ತಿ ಸಮಯದಲ್ಲಿ ನೀಡಿದ ಇಪ್ಪತ್ತು ಲಕ್ಷ ರೂಪಾಯಿ ಹಣವನ್ನು ಬ್ಯಾಂಕಿಗೆ ಜಮಾ ಮಾಡಿರುವುದಿಲ್ಲ.

3. ನಾನು ಬಾಂಬೆಯಲ್ಲಿ ಲೇಬರ್ ಕೆಲಸ ಮಾಡುತ್ತಿದ್ದೆ. ನಾನು ಯಾವುದೇ ದಾಖಲೆಗಳನ್ನು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ನನ್ನ ಮಗನಾದ ಮಹೇಶ್ ಎಂಬುವವರು ನನ್ನ ವಿರುದ್ಧ ಮತ್ತು ನಮ್ಮ ಕುಟುಂಬದ ಇತರೆ ಸದಸ್ಯರ ವಿರುದ್ಧ ಅಸಲು ದಾವಾ ಸಂಖ್ಯೆ 269/2017 ರ ರೀತ್ಯಾ ವಿಭಾಗ ಕೋರಿ ದಾವಾ ದಾಖಲಿಸಿದ್ದು, ಸದರಿ ದಾವೆಯು ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಕೀಲರು ಮುಖಾಂತರ ಹಾಜರಾಗಿ ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಸದರಿ ದಾವೆಯ ತಕರಾರಿನಲ್ಲಿ ನಾನು ಬಾಂಬೆಯಲ್ಲಿ ಸಂಪಾದನೆ ಮಾಡಿದ ಬಗ್ಗೆ ಮತ್ತು ದಾವಾ ಸ್ವತ್ತು ನನ್ನ ಸ್ವಯಾರ್ಜಿತ ಆಸ್ತಿ ಆದ ಬಗ್ಗೆ ತಿಳಿಸಿರುತ್ತೇನೆ.

4. ನಾನು ನಿವೇಶನವನ್ನು ಕ್ರಯಕ್ಕೆ ತೆಗೆದುಕೊಂಡಿರುತ್ತೇನೆ. ನಾನು ನನ್ನ ಮಕ್ಕಳು ಮತ್ತು ಸೊಸೆಯಂದಿರು ವಿರುದ್ಧ ಕೆ ಆರ್ ಪೇಟೆಯ ಟೌನ್ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.